VK
ವಿಜಯ ಕರ್ನಾಟಕ
e-paper



ಪಟ್ರೇಹಳ್ಳಿಯ 25 ಕುಟುಂಬಗಳಿಗೆ ಸೆಲ್ಕೋ ಸಂಸ್ಥೆಯಿಂದ ಉಚಿತವಾಗಿ ತೆಂಗಿನ ನಾರು ವಿತರಿಸಲಾಯಿತು.

# 10 ಸಾವಿರ ಕೆಜಿ ತೆಂಗಿನ ನಾರು ವಿತರಣೆ

**ವಿಕ ಸುದ್ದಿಲೋಕ** ಚಿತ್ರದುರ್ಗ

ಕೋವಿಡ್ ಸಂದರ್ಭದಲ್ಲಿ ಜೀವನಾಧಾರಕ್ಕಾಗಿ ಹಗ್ಗ ಮಾಡುವುದರಿಂದಲೇ ತಮ್ಮ ಬದುಕನ್ನು ಕಟ್ಟಿಕೊಂಡಿರುವ ಹಿರಿಯೂರು ತಾಲೂಕಿನ ಪಟ್ರೇಹಳ್ಳಿಯ 25 ಕುಟುಂಬಗಳಿಗೆ ಸೆಲ್ಕೋ ಸಂಸ್ಥೆಯಿಂದ ಉಚಿತವಾಗಿ 1 ಕುಟುಂಬಕ್ಕೆ ತಲಾ 400 ಕೆಜಿಯಂತೆ 1.45 ಲಕ್ಷ ಮೌಲ್ಯದ ಸುಮಾರು ಹತ್ತು ಸಾವಿರ ಕೆ.ಜಿ ತೆಂಗಿನ ನಾರು ವಿತರಿಸಲಾಯಿತು.

ಈ ವೇಳೆ ಸೆಲ್ಕೋ ಸಂಸ್ಥೆಯ ಏರಿಯಾ ಮ್ಯಾನೇಜರ್ ಮಂಜುನಾಥ್ ಭಾಗ್ವತ್ ಮಾತನಾಡಿ, ರಾಟೆಯ ಮೂಲಕ ಹಗ್ಗ ತಯಾರಿಸುತ್ತಿದ್ದ ಈ ಕುಟುಂಬಗಳು ಇಂದು ಆಧುನಿಕ ತಂತ್ರಜ್ಞಾನ ಮೂಲಕ ಸೌರಶಕ್ತಿಚಾಲಿತ ಯಂತ್ರ ಅಳವಡಿಸಿಕೊಂಡು ಹಗ್ಗ ತಯಾರಿಸುತ್ತಿದ್ದಾರೆ.ಇದು ಮೂರು ಜನ ಮಾಡುವ ಕೆಲಸವನ್ನು ಇಬ್ಬರೇ ಮಾಡಲು ಸಹಕಾರಿಯಾಗಿದೆ. ಇದರಿಂದ ಮಾನವ ಸಂಪನ್ಮೂಲ, ಶ್ರಮ ಮತ್ತು ಆದಾಯದ ಮಟ್ಟ ಏರಿಕೆಯಾಗುವುದರಲ್ಲಿ ಸೌರಶಕ್ತಿ ಪ್ರಮುಖ ಪಾತ್ರವಹಿಸಿದೆ ಎಂದರು.

ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಯೋಜನಾಧಿಕಾರಿ ಹರಿಪ್ರಸಾದ್ ಮಾತನಾಡಿ, ಲಾಕ್ ಡೌನ್ ಸಂದರ್ಭದಲ್ಲಿ ಹಗ್ಗ ಮಾಡುವ ಕುಟುಂಬಗಳಿಗೆ ಉಂಟಾದ ಆರ್ಥಿಕ ಸಂಕಷ್ಟ ಮನಗಂಡ ಸೆಲ್ಕೋ ಈ ರೀತಿಯ ವಿನೂತನ ಯೋಜನೆಯ ಮೂಲಕ ಇತರರಿಗೆ ಮಾದರಿಯಾಗಿದೆ ಎಂದರು.

ಗ್ರಾಪಂ ಅಧ್ಯಕ್ಷ ರಘು ನಾಯ್ಕ್, ಸದಸ್ಯರಾದ ಸೋಮಶೇಖರ್, ರತ್ನಮ್ಮ, ಸೆಲ್ಕೋ ಸಂಸ್ಥೆಯ ಪ್ರತಿನಿಧಿ ಪುನೀತ್‌ಕುಮಾರ್, ಪುಷ್ಪ ಮತ್ತಿತರರಿದ್ದರು.